**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>**

**<u>ಸಿ.ಸಿ. ನಂ.*199/2025*</u>**

*<u>ಫಿರ್ಯಾದುದಾರರುಃ</u>* ಸರ್ಕಾರದ ಪರವಾಗಿ ಜಯಪುರ ಪೊಲೀಸರು

**ವಿರುದ್ಧ**

| | | |
|---|---|---|
| *ಆರೋಪಿ/ತರುಃ* | 1 | ಆಲಿ ಸಾಹೇಬ್ ಬಿನ್ ಸಿದ್ದಿ ಮೊಹಮದ್, 66 ವರ್ಷ, ಕೂಲಿ ಕೆಲಸ ವಾಸ ಬಗ್ಗುಂಜಿ, ಹೆದ್ಸೆ ಗ್ರಾಮ, ಕೊಪ್ಪ ತಾಲ್ಲೂಕು. |
| | 2 | ಮುಫೀಜ್ ಬಿನ್ ಅಲಿಸಾಹೇಬ್, 34 ವರ್ಷ, ಪೈಂಟಿಂಗ್ ಕೆಲಸ, ವಾಸ ಬಗ್ಗುಂಜಿ, ಹೆದ್ಸೆ ಗ್ರಾಮ, ಕೊಪ್ಪ ತಾಲ್ಲೂಕು, |
| | 3 | ಮಹ್ಮದ್ ಶಹಾಬ್ ಬಿನ್ ಅಬ್ದುಲ್ ರಫೀಕ್, 33 ವರ್ಷ, ರೈಟರ್ ಕೆಲಸ, (ಅಲ್ಲೂರು ಎಸ್ಟೇಟ್, ಬಿದರೆ ಗ್ರಾಮ) ಹಾಲಿ ವಾಸ ಬಿದರೆ ಗ್ರಾಮ, ಖಾಂಡ್ಯಾ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು, ಕಡ್ಲೆಮಕ್ಕಿ, ಬಾಳೆಹೊನ್ನೂರು, ನ.ರಾ.ಪುರ ತಾಲ್ಲೂಕು. |
| | 4 | ಮಹ್ಮದ್ ಅಲ್ತಾಜ್ ಬಿನ್ ಅಬ್ದುಲ್ ರಫೀಕ್ **(ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ.)** |

***<u>ದೋಷಾರೋಪಣೆ</u>***

ಶ್ರೀಮತಿ ಎಂ.ಎನ್. ನಂದಿನಿ, ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ, 18.01.2025 ರಂದು ಮದ್ಯಾಹ್ನ ಸುಮಾರು 3.30 ಗಂಟೆ ಸಮಯದಲ್ಲಿ ಜಯಪುರ ಠಾಣಾ ಸರಹದ್ದಿನ ಹೆದ್ಸೆ ಗ್ರಾಮದ ಬಗ್ಗುಂಜಿ ಎಂಬಲ್ಲಿ ಚಾಸಾ.1 ಸುರೇಶ ಬಿ.ಎನ್. ರವರು ಚಾಸಾ.2 ಸಾವಿತ್ರಿ ಮತ್ತು ಚಾಸಾ.3 ಸುಪ್ರೀತಾ ರವರೊಂದಿಗೆ ಮನೆಯಲ್ಲಿರುವಾಗ್ಗೆ 1 ರಿಂದ 3 ನೇ ಆರೋಪಿತರು 4 ನೇ ಆರೋಪಿಯೊಂದಿಗೆ ಸೇರಿಕೊಂಡು ಸಮಾನ ಉದ್ದೇಶದಿಂದ, ಚಾಸಾ.1 ರವರೊಂದಿಗೆ ಕೋಳಿ ಜಗಳದ ವಿಚಾರದಲ್ಲಿ ದ್ವೇಷವನ್ನು ಇಟ್ಟುಕೊಂಡು, ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಚಾಸಾ.1 ರವರೊಂದಿಗೆ ಜಗಳ ತೆಗೆದು ಗಲಾಟೆ ಮಾಡಿ ಹೋಗಿದ್ದವನು, ಪುನಃ ಮಧ್ಯಾಹ್ನ ಸುಮಾರು 3.30 ಗಂಟೆಗೆ 2 ರಿಂದ 4 ನೇ ಆರೋಪಿಗಳನ್ನು ತನ್ನ ಜೊತೆ ಕರೆದುಕೊಂಡು ಚಾಸಾ.1 ರವರ ಮನೆಯ ಹತ್ತಿರ ಬಂದು ಚಾಸಾ.1

ರವರಿಗೆ ಬಾರೋ ಬೋಳಿಮಗನೆ, ನನಗೆ ಗಲಾಟೆ ಮಾಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ಅವಮಾನ ಮಾಡಿದ್ದೀರಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 352 ಸಹ ಕಲಂ 3(5)**ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3ನೇ ಆರೋಪಿತರು 4ನೇ ಆರೋಪಿಯೊಂದಿಗೆ ಸೇರಿಕೊಂಡು ಸಮಾನ ಉದ್ದೇಶದಿಂದ ಮುಂದುವರೆದು ಚಾಸಾ.1 ರವರ ಮನೆಯೊಳಗೆ ಚಾಸಾ.1ರವರ ಅನುಮತಿ ಇಲ್ಲದೆ ಅತಿಕ್ರಮ ಪ್ರವೇಶ ಮಾಡಿದ್ದೀರಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 329(2) ಸಹ ಕಲಂ 3(5)** ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3ನೇ ಆರೋಪಿತರು 4ನೇ ಆರೋಪಿಯೊಂದಿಗೆ ಸೇರಿಕೊಂಡು ಸಮಾನ ಉದ್ದೇಶದಿಂದ ಮುಂದುವರೆದು 2ನೇ ಆರೋಪಿತನು ಚಾಸಾ.1 ರವರಿಗೆ ದೊಣ್ಣೆಯಿಂದ ಎರಡು ಭುಜಗಳಿಗೆ, ಕೈಗಳಿಗೆ, ಸೊಂಟಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದೀರಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 115(1) ಸಹ ಕಲಂ 3(5)**ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3ನೇ ಆರೋಪಿತರು 4ನೇ ಆರೋಪಿಯೊಂದಿಗೆ ಸೇರಿಕೊಂಡು ಸಮಾನ ಉದ್ದೇಶದಿಂದ ಮುಂದುವರೆದು 3ನೇ ಆರೋಪಿತನು ಚಾಸಾ.1ರವರಿಗೆ ಕಾಲಿನಿಂದ ಒದ್ದು ನೋವುಂಟು ಮಾಡಿದ್ದೀರಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 118(1) ಸಹ ಕಲಂ 3(5)**ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

ಸಹಿ/- 28.11.2025.

(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.

**<u>ದೋಷಾರೋಪಣೆ</u>**

ಪ್ರ-1ಃ ಈ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉಃ ಆ-1 ತಿಳಿಯಿತು ಆ-3 ತಿಳಿಯಿತು

ಆ-2 ತಿಳಿಯಿತು ಆ-4 ತಿಳಿಯಿತು

ಪ್ರ-2ಃ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ನಿಮಗೆ ಏನಾದರೂ ಪ್ರತಿರಕ್ಷೆ ಇದೆಯೇ?

ಉಃ ಆ-1 ವಿಚಾರಣೆಯಾಗಬೇಕು ಆ-3 ವಿಚಾರಣೆಯಾಗಬೇಕು

ಆ-2 ವಿಚಾರಣೆಯಾಗಬೇಕು ಆ-4 ವಿಚಾರಣೆಯಾಗಬೇಕು

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 28.11.2025.

ಸಹಿ/- 28.11.2025.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.

ಆರೋಪಿತರ ಸಹಿಃ